

بسم اللهِ الرّحمٰن الرّحيم

# ಅಲ್ಲಾಹನ ಮತ್ತು ಅವನ ದಾಸರ ಹಕ್ಕುಗಳನ್ನು ಸರಿಯಾಗಿ ಈಡೇರಿಸಿಕೊಡುವಾಗ ಮಾತ್ರ ಮಸ್‌ಜಿದ್‌ಗಳಿಗೆ ಸಂಬಂಧಿಸಿದ ಹಕ್ಕುಗಳು ಈಡೇರಿಸಲ್ಪಡುತ್ತವೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು **26-09-2014** ರಂದು **ಐಯರ್‌ಲೇಂಡಿನ ಪ್ರಥಮ ಅಹ್ಮದಿಯಾ ಮಸ್‌ಜಿದ್** ಉದ್ಘಾಟನೆಯೊಂದಿಗೆ ನೀಡಿದ ಜುಮುಅ ಖುತುಬದ ಸಾರಾಂಶ)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ಪಠಿಸಿದರು:

**إِنَّمَا يَعْمُرُ مَسَاجِدَ اللَّهِ مَنْ آمَنَ بِاللّٰهِ وَالْيَوْمِ الآخِرِ وَأَقَامَ الصَّلاَةَ وَآتَى الزَّكَاةَ وَلَمْ يَخْشَ إِلاَّ اللّٰهَ فَعَسَى أُوْلَئِكَ أَنْ يَكُونُوا مِنْ الْمُهْتَدِينَ**

*ಇನ್ನಮಾ ಯಅ್ಮುರು ಮಸಾಜಿದಲ್ಲಾಹಿ ಮನ್ ಆಮನ ಬಿಲ್ಲಾಹಿ ವಲ್ ಯೌಮಿಲ್ ಆಖಿರಿ ವ ಅಖಾಮಸ್ಸಲಾತ ವ ಆತಝ್ಝುಕಾತ ವ ಲಮ್ ಯಖ್‌ಶ ಇಲ್ಲಲ್ಲಾಹ ಫಅಸಾ ಉಲಾಯಿಕ ಅನ್ ಯಕೂನೂ ಮಿನಲ್ ಮುಹ್‌ತದೀನ್.*

ಅರ್ಥ: **ಯಾರು ಅಲ್ಲಾಹನಲ್ಲೂ ಅಂತ್ಯ ದಿನದ ಬಗ್ಗೆಯೂ ವಿಶ್ವಾಸವಿಡುತ್ತಾರೋ, ನಮಾಝುನ್ನು ನಿಷ್ಠೆಯಿಂದ ನಿರ್ವಹಿಸುತ್ತಾರೋ, ಝುಕಾತ್ ನೀಡುತ್ತಾರೋ, ಅಲ್ಲಾಹನಿಗೆ ಹೊರತು (ಬೇರೆ ಯಾರಿಗೂ) ಭಯಪಡುವುದಿಲ್ಲವೋ ಅವರು ಮಾತ್ರ ಅಲ್ಲಾಹನ ಮಸ್‌ಜಿದ್‌ಗಳನ್ನು ಪರಿಪಾಲಿಸುವ ಹಕ್ಕುದಾರರು. ಅಂತಹವರೇ ಮಾರ್ಗದರ್ಶನ ಹೊಂದಬಲ್ಲರು.**(ಪವಿತ್ರ ಖುರ್‌ಆನ್: 9: 18)

**ಅಲ್‌ಹಮ್‌ದುಲಿಲ್ಲಾಹ್–** ಎಲ್ಲಾ ಸ್ತುತಿ ಅಲ್ಲಾಹನಿಗೆ ಸಲ್ಲುವುವು. ಈ ದಿನ ಐಯರ್‌ಲೇಂಡ್ ದೇಶದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ನಿರ್ಮಿಸಿದ ಪ್ರಥಮ ಮಸ್‌ಜಿದ್‌ನಲ್ಲಿ ಜುಮುಅ ನಮಾಝ್ ಅನುಷ್ಠಿಸುವ ಭಾಗ್ಯವನ್ನು ಅಲ್ಲಾಹನು ನಮಗೆ ದಯಪಾಲಿಸಿರುವನು. ಈ ಮಸ್‌ಜಿದ್ ನಿರ್ಮಾಣ ಅಲ್ಲಾಹನು ನಮಗೆ ಎಲ್ಲಾ ರೀತಿಗಳಲ್ಲೂ ಅನುಗ್ರಹದಾಯಕವನ್ನಾಗಿ ಮಾಡಲಿ. ಈ ಮಸ್‌ಜಿದ್ ಚಿಕ್ಕದಾಗಿದ್ದರೂ ಈ ಮಸ್‌ಜಿದ್ ನಿರ್ಮಿಸಿ ಮುಹಮ್ಮದೀ ಮಸೀಹರನ್ನು ನಂಬುವವರು ಅಲ್ಲಾಹನ ಏಕತ್ವವನ್ನು ಪ್ರತಿದಿನ ಐದು ಹೊತ್ತು ಘೋಷಿಸುವರೆಂದೂ ಈ ಮಸ್‌ಜಿದ್‌ನಲ್ಲಿ ಐದು ಹೊತ್ತು ಅಲ್ಲಾಹನ ಆರಾಧನೆ ಮಾಡುವರೆಂದೂ ಸೂಚಿಸಲಾಗುತ್ತಿದೆ. ಮಸ್‌ಜಿದ್‌ಗಳು ಅಲ್ಲಾಹನ ಮತ್ತು ಅವನ ದಾಸರ ಹಕ್ಕುಗಳನ್ನು ಈಡೇರಿಸುವ ಸ್ಥಳಗಳೆಂದೂ ಹಿಂಸಾಚಾರ ಮತ್ತು ಕಲಹಗಳ ಸ್ಥಳವಲ್ಲವೆಂದೂ ಅವರು ಘೋಷಿಸುವರು. ಎಲ್ಲಾ ಕಾಲಘಟ್ಟಗಳ ಜನರ ಪಾಲನೆ ಪೋಷಣೆ ಮಾಡುವ ತನ್ನ ಗುಣವನ್ನು ಪ್ರಕಟಿಸುವ ಸರ್ವ ಲೋಕಗಳ ಪರಿಪಾಲಕನಾದ ಅಲ್ಲಾಹನ ಆರಾಧನೆಗೋಸ್ಕರ ಮಸ್‌ಜಿದ್‌ಗಳನ್ನು ನಿರ್ಮಿಸಲಾಗುತ್ತಿದೆ. ಅವನು ಹಿಂದಿನ ಕಾಲದಲ್ಲಿ ಪ್ರತಿಯೊಂದು ಜನಾಂಗದ ಲೌಕಿಕ ಮತ್ತು ಆಧ್ಯಾತ್ಮಿಕ ಅಭಿವೃದ್ಧಿಗೋಸ್ಕರ ತನ್ನ ಪರಿಪಾಲಕನೆಂಬ ಗುಣವನ್ನು ಪ್ರಕಟಿಸಿದನು. ಇಂದಿನ ಕಾಲದಲ್ಲೂ ಅಲ್ಲಾಹನು ತನ್ನ ಪರಿಪಾಲಕನೆಂಬ ಗುಣದ ಮೂಲಕ ಲೋಕಕ್ಕೆ ಅನುಗ್ರಹ ನೀಡುತ್ತಿದ್ದಾನೆ. ಇನ್ನು ಮುಂದೆಯೂ ಸಹ ಅವನು ತನ್ನ ಪರಿಪಾಲಕನೆಂಬ ಗುಣದ ಅನುಗ್ರಹಗಳನ್ನು ದಯಪಾಲಿಸುತ್ತಾ ಹೋಗುವನು. ಅಲ್ಲಾಹನ ಪರಿಪಾಲಕನೆಂಬ ಗುಣ ಯಾವುದೇ ವಿಶಿಷ್ಟ ಜನಾಂಗಕ್ಕೆ ಸೀಮಿತವಾಗಿಲ್ಲ. ಅದು ಸರ್ವ ಲೋಕಗಳಿಗೂ ಸರ್ವ ಸೃಷ್ಟಿಗಳಿಗೂ ಅನುಗ್ರಹಕರವಾಗಿದೆ. ಆದುದರಿಂದ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮಸ್‌ಜಿದ್‌ಗಳು ಹೀಗೆ ಘೋಷಿಸುತ್ತವೆ– ಅಲ್ಲಾಹನ ಆಧ್ಯಾತ್ಮಿಕವಾದ ಪರಿಪಾಲಕತ್ವದ ಬಗ್ಗೆ ಜ್ಞಾನಗಳಿಸಬೇಕಾದರೆ ಮುಹಮ್ಮದೀ ಮಸೀಹರ ಜಮಾಅತ್‌ನಲ್ಲಿ ಸೇರುವವರಿಗೆ ಮಾತ್ರ ಈ ಜ್ಞಾನ ವಾಸ್ತವಿಕ ರೂಪದಲ್ಲಿ ಲಭಿಸಲು ಸಾಧ್ಯ ಎಂದು. ಲೋಕದಿಂದ ಕಲಹ ಮತ್ತು ಹಿಂಸಾಚಾರಗಳನ್ನು ದೂರ ಸರಿಸಲು ಇಸ್ಲಾಮಿನ ಸುಂದರ ಉಪದೇಶಗಳ ಬಗ್ಗೆ ಯೋಚಿಸಿರಿ ಎಂದು ಘೋಷಿಸಲಿಕ್ಕಾಗಿ ನಾವು ಈ ಮಸ್‌ಜಿದ್‌ಗಳನ್ನು ನಿರ್ಮಿಸುತ್ತೇವೆ. ಇಸ್ಲಾಮ್ ಪ್ರೀತಿ, ವಾತ್ಸಲ್ಯ, ಸೌಹಾರ್ದ ಮತ್ತು ಶಾಂತಿಯ ಸಂದೇಶ ನೀಡುತ್ತಿದೆ. ನಾವು ಈ ಮಸ್‌ಜಿದ್‌ಗಳನ್ನು ನಿರ್ಮಿಸುವುದರ ಉದ್ದೇಶ ಲೋಕಕ್ಕೆ ಪ್ರೀತಿ, ಭ್ರಾತೃಭಾವಗಳ ಆವಶ್ಯಕತೆಗಳಿವೆ ಎಂದೂ ಯುದ್ಧ, ಜಗಳಗಳ ಆವಶ್ಯಕತೆಗಳಿಲ್ಲ, ಖಡ್ಗ, ತುಪಾಕಿಗಳ ಆವಶ್ಯಕತೆಗಳಿಲ್ಲ ಎಂದೂ ಪ್ರಕಟಿಸಲಿಕ್ಕಾಗಿದೆ. ಈ ಮಸ್‌ಜಿದ್‌ಗೆ ಬರುವವರ ಹೃದಯ ಎಲ್ಲಾ ವಿಧಗಳ ದೌರ್ಜನ್ಯ ಮತ್ತು ಹಕ್ಕುಗಳ ಅಪಹರಣ ಇತ್ಯಾದಿ ಯೋಚನೆಗಳಿಂದ ಮುಕ್ತವಾಗಿ ಸ್ವಚ್ಛವಾಗಿರುತ್ತದೆ ಎಂದು ನಮ್ಮ ಈ ಮಸ್‌ಜಿದ್ ಸಾರಿ ಹೇಳುತ್ತದೆ. ನಮ್ಮ ಮಸ್‌ಜಿದ್‌ಗಳು ಎಂತಹ ಕೇಂದ್ರಗಳಾಗಿವೆ ಎಂದರೆ ಇಲ್ಲಿಗೆ ಆರಾಧನೆಗೋಸ್ಕರ ಆಗಮಿಸುವವರು ಅನ್ಯರ ಹಕ್ಕುಗಳನ್ನು ಈಡೇರಿಸಿಕೊಡಲು ಎಲ್ಲಾ ವಿಧ ತ್ಯಾಗಗಳನ್ನು ಮಾಡುವವರಾಗಿದ್ದಾರೆ. ಈ ಮಸ್‌ಜಿದ್‌ಗಳನ್ನು ನಿರ್ಮಿಸುವವರು ತಮ್ಮ ಸ್ವಂತ ಜನರ ಹಕ್ಕುಗಳನ್ನು ಈಡೇರಿಸಿ ಕೊಡುವಾಗ ಕರುಣೆಯಿಂದ ವರ್ತಿಸುವಂತೆಯೇ ತಮ್ಮ ಶತ್ರುಗಳ ಹಕ್ಕುಗಳನ್ನು ಈಡೇರಿಸುವಾಗ ಸಹ ನ್ಯಾಯ ಪೂರ್ಣವಾಗಿಯೇ ವರ್ತಿಸುತ್ತಾರೆ. ಧಾರ್ಮಿಕ ಸ್ವಾತಂತ್ರ್ಯದ ಎಲ್ಲರಿಗಿಂತ ದೊಡ್ಡ ಧ್ವಜ ವಾಹಕ ಇಸ್ಲಾಮ್ ಧರ್ಮವೇ ಆಗಿದೆ ಎಂದೂ ಇದಕ್ಕೋಸ್ಕರ ನಮ್ಮ ಮಸ್‌ಜಿದ್‌ಗಳ ಬಾಗಿಲುಗಳು ಎಲ್ಲರಿಗೂ ತೆರೆದಿರುತ್ತದೆ ಎಂದೂ ನಾವು ನಿರ್ಮಿಸುವ ಮಸ್‌ಜಿದ್‌ಗಳು ಘೋಷಿಸುತ್ತವೆ. ಏಕದೇವನನ್ನು ಆರಾಧಿಸುವ ಯಾರಿಗೂ ಸಹ ಈ ಮಸ್‌ಜಿದ್‌ನಲ್ಲಿ ಆರಾಧನೆ ಮಾಡಲು ಯಾವ ಅಡ್ಡಿಯೂ ಇಲ್ಲ. ಮುಸ್ಲಿಮನೋ ಮುಸ್ಲಿಮೇತರನೋ ಎಂದು ಪರಿಗಣಿಸುವುದಿಲ್ಲ. ನಮ್ಮ ಮಸ್‌ಜಿದ್‌ಗಳು ಮತ್ತು ಅವುಗಳಿಗೆ ಬರುವ ಪ್ರತಿಯೊಬ್ಬ ಅಹ್ಮದಿ ಹೀಗೆ ಪ್ರಕಟಿಸುತ್ತಾರೆ– ಪವಿತ್ರ ಖುರ್‌ಆನಿನ ಉಪದೇಶಗಳ ಪ್ರಕಾರ ಎಲ್ಲಾ ಧರ್ಮಗಳ ಆರಾಧನಾಲಯಗಳನ್ನು ರಕ್ಷಿಸುವುದು ಪ್ರತಿಯೊಬ್ಬ ನೈಜ ಮುಸ್ಲಿಮನ ಕಡ್ಡಾಯವಾದ ಜವಾಬ್ದಾರಿಯಾಗಿದೆ. ತನ್ನ ಮಸ್‌ಜಿದನ್ನು ಸಂರಕ್ಷಿಸುವ ಹೊಣೆಗಾರಿಕೆ ಒಬ್ಬ ಮುಸ್ಲಿಮನಿಗೆ ಎಷ್ಟು ಆವಶ್ಯಕವಾಗಿದೆಯೋ ಅಷ್ಟೇ ಆವಶ್ಯಕತೆ

ಅನ್ಯಧರ್ಮದವರ ಆರಾಧನಾಲಯಗಳ ಸಂರಕ್ಷಣೆಯಲ್ಲೂ ಇದೆ. ನಮ್ಮ ಮಸ್‌ಜಿದ್‌ಗಳು ನಮಗೆ ಹೀಗೆ ತಿಳಿಸುತ್ತವೆ: ದೇಶಪ್ರೇಮ ಮತ್ತು ದೇಶನಿಷ್ಠೆ ಸತ್ಯವಿಶ್ವಾಸದ ಒಂದು ಭಾಗವಾಗಿದೆ. ಒಬ್ಬನು ತನ್ನ ದೇಶಕ್ಕೆ ನಿಷ್ಠನಾಗುವ ತನಕ ಸತ್ಯವಿಶ್ವಾಸಿಯಾಗಲಾರ.

ಒಟ್ಟಿನಲ್ಲಿ, ಮಸ್‌ಜಿದ್‌ಗಳೊಂದಿಗೆ ಸರಿಯಾದ ಸಂಬಂಧ ಹೊಂದಿದವರಿಂದ ಅದು ಅನೇಕ ವಿಷಯಗಳನ್ನು ಆವಶ್ಯಪಡುತ್ತದೆ. ಅಲ್ಲಾಹನ ಮತ್ತು ಅಲ್ಲಾಹನ ದಾಸರ ಹಕ್ಕುಗಳನ್ನು ಸರಿಯಾಗಿ ಈಡೇರಿಸಿಕೊಡುವಾಗ ಮಾತ್ರ ಮಸ್‌ಜಿದ್‌ಗಳಿಗೆ ಸಂಬಂಧಿಸಿದ ಹಕ್ಕುಗಳು ಈಡೇರಿಸಲ್ಪಡುತ್ತವೆ. ಈ ಎಲ್ಲಾ ಕೆಲಸಗಳನ್ನು ಮಾಡಲು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಆಜ್ಞಾಪಿಸಿದ್ದಾನೆ. ಈ ಎಲ್ಲಾ ವಿಷಯಗಳ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಪದೇ ಪದೇ ಉಪದೇಶಿಸಿರುವರು. ಅವರು **ಹುಖೂಖುಲ್ಲಾಹ್** (ಅಲ್ಲಾಹನ ಹಕ್ಕುಗಳು) ಮತ್ತು **ಹುಖೂಖುಲ್ ಇಬಾದ್**(ದಾಸರ ಹಕ್ಕುಗಳು) ಇವುಗಳನ್ನು ತನ್ನ ಉತ್ತಮವಾದ ಮಾದರಿಯ ಮೂಲಕ ಈಡೇರಿಸಿರುವರು. ಮಾನವೀಯ ಮೌಲ್ಯ, ಪ್ರೀತಿ, ಸುರಕ್ಷೆ ಮತ್ತು ಶಾಂತಿಯ ಸ್ಥಾಪನೆಗೋಸ್ಕರ ಅವರು ಅನುಕರಣೀಯವಾದ ಮಾದರಿಯನ್ನು ಪ್ರಕಟಿಸಿದರು. ಇದರ ಬಗ್ಗೆ ಚರಿತ್ರೆ ಸಾಕ್ಷ್ಯವಹಿಸುತ್ತದೆ. ಒಂದು ಸಂದರ್ಭದಲ್ಲಿ ಕ್ರೈಸ್ತರು ತಮ್ಮ ಪ್ರಾರ್ಥನೆಯ ಸಮಯವಾಗಿದೆ ಎಂದು ಹೇಳಿದಾಗ ಅವರಿಗೆ ತನ್ನ ಮಸ್‌ಜಿದ್‌ನಲ್ಲಿ ಎಂದರೆ ಮಸ್‌ಜಿದ್ ನಬವಿಯಲ್ಲಿ ಅವರಿಗೆ ಆರಾಧಿಸಲು ಅನುಮತಿ ನೀಡಿದರು. ಈ ವಾಸ್ತವಿಕ ಇಸ್ಲಾಮಿಕ ತತ್ವಗಳನ್ನು ಈ ಕಾಲಘಟ್ಟದಲ್ಲಿ ಅನುಷ್ಠಾನಕ್ಕೆ ತರಬೇಕೆಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸತ್ಯಸಂಧನಾದ ಪ್ರೇಮಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ಆಜ್ಞೆ ನೀಡಿರುವರು. ಈ ಎಲ್ಲಾ ಕೆಲಸಗಳನ್ನು ನಮ್ಮಿಂದ ಪ್ರತೀಕ್ಷಿಸಿ ಈ ಕಾಲಘಟ್ಟದ ಇಮಾಮರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ನೀವು ಇಂತಹ ಮನೋಭಾವ ಹೊಂದಿ ಮಸ್‌ಜಿದ್‌ಗಳನ್ನು ನಿರ್ಮಿಸಿದರೆ ನಿಮಗೆ ಇಸ್ಲಾಮ್ ಧರ್ಮದ ಪರಿಚಯ ಮಾಡಿಕೊಡುವ ಮತ್ತು ಪ್ರಚಾರದ ಮಾರ್ಗಗಳು ತೆರೆಯುತ್ತಾ ಹೋಗುವುವು ಎಂದು ಉಪದೇಶಿಸಿರುವರು. ಜನರು ಇಸ್ಲಾಮಿನ ಬಗ್ಗೆ ಲಕ್ಷ್ಯ ನೀಡುವರು ಎಂದೂ ಇಸ್ಲಾಮಿನ ಸುಂದರ ತತ್ವಗಳು ಅವರನ್ನು ಅನುಸರಿಸುವಂತೆ ಮಾಡುವುವು ಎಂದೂ ಈ ರೀತಿ ನಿಮ್ಮ ಜನಸಂಖ್ಯೆ ವರ್ಧಿಸುತ್ತಾ ಹೋಗುವುದು ಎಂದೂ ಉಪದೇಶಿಸಿರುವರು. ನಾವು ಮಸ್‌ಜಿದ್‌ಗಳನ್ನು ನಿರ್ಮಿಸುವುದರ ಉದ್ದೇಶ ಇದೇ ಆಗಿದೆ. ನಾವು ಮಸ್‌ಜಿದ್‌ಗಳನ್ನು ನಿರ್ಮಿಸುತ್ತಾ ಮುಂದುವರಿಯುವೆವು.

ಈ ಉಪದೇಶಗಳನ್ನು ಮಾಧ್ಯಮಗಳ ಮೂಲಕ ಕಂಡು ಮತ್ತು ಅದರ ಬಗ್ಗೆ ತಿಳಿದುಕೊಂಡು ಲೋಕದ ಜನರ ಶ್ರದ್ಧೆ ನಮ್ಮ ಜಮಾಅತಿನ ಕಡೆಗೆ ತಿರುಗುತ್ತಾ ಇದೆ. ಒಬ್ಬ ಸಾಮಾನ್ಯ ಮನುಷ್ಯನಿಂದ ಹಿಡಿದು ದೊಡ್ಡ ದೊಡ್ಡ ಜನನಾಯಕರು ಮತ್ತು ರಾಜಕಾರಣಿಗಳು ಇದನ್ನು ವೀಕ್ಷಿಸುತ್ತಿದ್ದಾರೆ. ಒಂದು ಕಡೆ ಭೀಕರವಾದಿಗಳ ಗುಂಪಿದೆ. ಅವರು ಹೊಡೆಯುತ್ತಾ ಬಡಿಯುತ್ತಾ ಕೊಲ್ಲುತ್ತಾ ಸುಡುತ್ತಾ ಇದ್ದಾರೆ. ಇನ್ನೊಂದು ಕಡೆ ಪ್ರೀತಿ, ಸೌಹಾರ್ದ ಮತ್ತು ಶಾಂತಿ ಸ್ಥಾಪನೆಗೆ ಒಂದು ಜಮಾಅತ್ ಪ್ರಯತ್ನಿಸುತ್ತಾ ಇದೆ. ಒಂದು ಕಡೆ ಮುಸ್ಲಿಮರೆಂದು ಹೇಳಿಕೊಳ್ಳುವವರ ಮಸ್‌ಜಿದ್‌ಗಳಿವೆ. ಅವುಗಳಲ್ಲಿ ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಹೆಸರಿನಲ್ಲಿ ಅವಾಚ್ಯ ಮಾತುಗಳೂ ಜನರನ್ನು ಕೆರಳಿಸುವಂತಹ ಭಾಷಣಗಳೂ ಕೇಳಿಸುತ್ತವೆ. ಇನ್ನೊಂದು ಕಡೆಯಲ್ಲಿ ಅಹ್ಮದಿಯಾ ಜಮಾಅತ್ ಸೌಹಾರ್ದ, ಪ್ರೇಮ ಮತ್ತು ಶಾಂತಿಯ ಮಾತುಗಳನ್ನಾಡುತ್ತಿದೆ. ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ ಎಂಬ ಘೋಷಣೆ ಅವರು ಮಾಡುತ್ತಿದ್ದಾರೆ.

ನಿಶ್ಚಯವಾಗಿಯೂ ಇವುಗಳು ಜನರ ಶ್ರದ್ಧೆಗೆ ಪಾತ್ರವಾಗುತ್ತವೆ. ಜನರು ಈ ಎರಡು ವಿಧಗಳ ಮುಸ್ಲಿಮರ ಬಗ್ಗೆ ಅನ್ವೇಷಿಸಲು ತೊಡಗುತ್ತಾರೆ. ಆಧುನಿಕ ವಾರ್ತಾ ಮಾಧ್ಯಮಗಳ ಮೂಲಕವೂ ಇಂಟರ್‌ನೆಟ್ ಮುಖಾಂತರವೂ ಜನರು ಅದರ ಬಗ್ಗೆ ತಿಳಿಯಲು ಪ್ರಯತ್ನಿಸುತ್ತಾರೆ. ಮೊನ್ನೆ ಡೇಟನ್ ನಗರದಲ್ಲಿ ಪಾರ್ಲಿಮೆಂಟನ್ನು ಸಂದರ್ಶಿಸಲು ಸಂದರ್ಭ ಲಭಿಸಿತು. ಅಲ್ಲಿ ಕೆಲವು ಪಾರ್ಲಿಮೆಂಟ್ ಸದಸ್ಯರನ್ನು ಭೇಟಿಯಾಗಲು ಸಾಧ್ಯವಾಯಿತು. ಅವರಲ್ಲೊಬ್ಬರು ಹೀಗೆ ಹೇಳಿದರು: ಮಾನವೀಯ ಮೌಲ್ಯಗಳನ್ನು ಮತ್ತು ಶಾಂತಿಯನ್ನು ಸ್ಥಾಪಿಸಲು ಅಹ್ಮದಿಯಾ ಜಮಾಅತ್ ಮಾಡುತ್ತಿರುವ ಪ್ರಯತ್ನಗಳು ಇತರ ಮುಸ್ಲಿಮರಲ್ಲಿ ಕಾಣಿಸುವುದಿಲ್ಲ. ನಾನು ಅಹ್ಮದಿಯಾ ಜಮಾಅತ್ ಬಗ್ಗೆ ಆಳವಾಗಿ ಸಂಶೋಧನೆ ನಡೆಸಿ ಈ ವಿಷಯ ತಿಳಿದುಕೊಂಡಿದ್ದೇನೆ. ಅಹ್ಮದಿಯಾ ಜಮಾಅತ್ ಡೇಟನ್ ನಗರದಲ್ಲಿಯೂ ಬೇಗನೆ ಮಸ್‌ಜಿದ್ ನಿರ್ಮಿಸಬೇಕು ಎಂದು ನಾನು ಬಯಸುತ್ತೇನೆ. ನನ್ನ ಈ ನಗರದಲ್ಲಿ ಪ್ರೀತಿ ಮತ್ತು ಉನ್ನತ ಮೌಲ್ಯಗಳ ಸಂದೇಶ ಹರಡಲಿ ಎಂದು ಆಶಿಸುತ್ತೇನೆ.

ನನ್ನ ಖುತುಬದ ಆರಂಭದಲ್ಲಿ ನಾನು ತಿಲಾವತ್ ಮಾಡಿದ ಪವಿತ್ರ ಖುರ್‌ಆನ್ ವಚನದಲ್ಲಿ ಅಲ್ಲಾಹನು ಮಸ್‌ಜಿದ್‌ಗಳನ್ನು ಪರಿಪಾಲನೆ ಮಾಡುವವರ ವೈಶಿಷ್ಟ್ಯಗಳನ್ನು ವಿವರಿಸಿದ್ದಾನೆ. ಪವಿತ್ರ ಕಅಬದಿಂದ ಮೊದಲುಗೊಂಡು ಪ್ರತಿಯೊಂದು ಮಸ್‌ಜಿದನ್ನು ಪರಿಪಾಲನೆ ಮಾಡುವವರಿಗೆ ಈ ವಚನ ಅನ್ವಯಿಸುತ್ತದೆ. ಇಂತಹ ಜನರ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನ್‌ನ ಇನ್ನೊಂದು ಸ್ಥಳದಲ್ಲಿ **'ಅಶದ್ದು ಹುಬ್ಬನ್ ಲಿಲ್ಲಾಹ್'** ಎಂದು ಹೇಳಿದ್ದಾನೆ. ಸತ್ಯವಿಶ್ವಾಸಿಗಳು ಅಲ್ಲಾಹನನ್ನು ಅತ್ಯಧಿಕ ಪ್ರೀತಿಸುತ್ತಾರೆ ಎಂದು. ಬೇರೆ ಯಾವುದೇ ರೀತಿಯ ಲೌಕಿಕ ಪ್ರೀತಿ ಅವರ ಮೇಲೆ ಇಷ್ಟು ಪ್ರಭಾವಶಾಲಿಯಾಗಿರುವುದಿಲ್ಲ. ಅವರು ಅಲ್ಲಾಹನ ಪ್ರೀತಿಯನ್ನು ಗಳಿಸಲು ತಮ್ಮ ಜೀವಿತವನ್ನು ವಿನಿಯೋಗಿಸುತ್ತಾರೆ. ಅವರು ಲೌಕಿಕ ಲಾಭಗಳಿಸಲಿಕ್ಕೋಸ್ಕರ ಅಲ್ಲಾಹನ ಬಗ್ಗೆ ಇರುವ ಪ್ರೀತಿಯನ್ನು ಮರೆತು ಬಿಡುವುದಿಲ್ಲ. ಅಲ್ಲಾಹನನ್ನು ಪ್ರೀತಿಸುವುದು ಆವಶ್ಯಪಡುವುದೇನೆಂದರೆ ಅಲ್ಲಾಹನ ಎಲ್ಲಾ ಆಜ್ಞೆಗಳನ್ನು ಪಾಲಿಸಬೇಕು. ಅವನನ್ನು ಆರಾಧಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: ''ಅಲ್ಲಾಹನ ಅಭಿಮಾನ ಬಯಸುವುದೇನೆಂದರೆ ಅವನನ್ನು ಪ್ರೀತಿಸುವುದರಲ್ಲಿ ಸತ್ಯವಿಶ್ವಾಸಿ ಬೇರೆ ಯಾರನ್ನೂ ಸಹಭಾಗಿಯನ್ನಾಗಿ ಮಾಡಬಾರದೆಂದಾಗಿದೆ. ಸತ್ಯವಿಶ್ವಾಸ ನಮಗೆ ಎಲ್ಲದಕ್ಕಿಂತಲೂ ಹೆಚ್ಚು

ಪ್ರಿಯವಾದುದಾಗಿದೆ. ಸತ್ಯವಿಶ್ವಾಸ ಸಂರಕ್ಷಿಸಲ್ಪಡಬೇಕಾದರೆ ನಾವು ಅಲ್ಲಾಹನ ಬಗ್ಗೆ ಹೊಂದಿರುವ ಪ್ರೀತಿಯಲ್ಲಿ ಬೇರೆ ಯಾರನ್ನೂ ಸಹ ಭಾಗಿಗಳನ್ನಾಗಿ ಮಾಡಬಾರದು.''

ಇದು ಬಹಳ ಶ್ರದ್ಧಾರ್ಹವಾದ ಹೇಳಿಕೆಯಾಗಿದೆ. ಪ್ರತಿಯೊಬ್ಬನು ಈ ಮಟ್ಟದ ಬಗ್ಗೆ ತನ್ನನ್ನು ಪರಿಶೀಲಿಸುವ ಆವಶ್ಯಕತೆ ಇದೆ. ನಾವು ಸ್ವತಃ ನಮ್ಮನ್ನು ಪರಿಶೀಲಿಸುವಾಗ ನಮ್ಮ ಸ್ಥಿತಿಯ ಬಗ್ಗೆ ತಿಳಿಯಲು ಸಾಧ್ಯವಾಗುತ್ತದೆ. ಪವಿತ್ರ ಖುರ್‌ಆನ್ ಅಸಂಖ್ಯಾತ ಆಜ್ಞೆಗಳನ್ನು ನೀಡಿದೆ. ಪವಿತ್ರ ಖುರ್‌ಆನಿನ ಏಳುನೂರು ಆಜ್ಞೆಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸದವನು ನನ್ನಿಂದ ದೂರ ಸರಿದು ಹೋಗುತ್ತಾನೆ ಎಂದೂ ನನ್ನೊಂದಿಗೆ ತನ್ನ ಸಂಬಂಧ ಕಡಿಯುತ್ತಾನೆ ಎಂದೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ.

ಅಲ್ಲಾಹನೊಂದಿಗೆ ನಮ್ಮ ಸಂಬಂಧ ಪರಿಪೂರ್ಣವಾಗುವುದು ನಾವು ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತಾ ಇರುವಾಗ ಮಾತ್ರವಾಗಿದೆ. ಅಲ್ಲಾಹನು ಹೇಳುತ್ತಾನೆ– ಸತ್ಯವಿಶ್ವಾಸಿಗಳು ಕೇವಲ ಬಾಯಿಯಲ್ಲಿ ಹೇಳಿಕೊಳ್ಳುವವರಲ್ಲ. ಅವರಿಗೆ ಪ್ರತಿ ಕ್ಷಣಗಳಲ್ಲೂ ಅಲ್ಲಾಹನ ಸಹಾಯವು ಕಾಣಿಸುತ್ತಾ ಇರುತ್ತದೆ. ಅವರ ಹೆಜ್ಜೆಗಳು ಮಾರ್ಗದರ್ಶನದ ಹೊಸ ಮಾರ್ಗಗಳ ಕಡೆಗೆ ಮುಂದುವರಿಯುತ್ತಾ ಇರುತ್ತವೆ. ಪ್ರತಿಯೊಂದು ಮಾರ್ಗ ಅವರಿಗೆ ಜಯದ ಹೊಸ ಬಾಗಿಲುಗಳನ್ನು ತೆರೆಯುತ್ತವೆ. ವಿಜಯದ ಬಾಗಿಲುಗಳು ತೆರೆಯುತ್ತಾ ಇರುತ್ತವೆ. ಅಲ್ಲಾಹನು ಅಹ್ಮದಿಯಾ ಜಮಾಅತ್‌ಗೆ ಎಂತಹ ಅನುಗ್ರಹ ನೀಡಿರುವನೆಂದರೆ ಈ ಜಮಾಅತಿನಲ್ಲಿರುವ ವಿಶ್ವಾಸಿಗಳು, ಅವರು ಕೇವಲ ವಿಶ್ವಾಸದ ಬಗ್ಗೆ ಪ್ರಕಟಿಸುವವರಾಗಿರುವುದಿಲ್ಲ. ಅಲ್ಲಾಹನ ಸಂಪ್ರೀತಿ ಗಳಿಸುವುದು ಅವರ ಉದ್ದೇಶ ಲಕ್ಷ್ಯವಾಗಿರುತ್ತದೆ. ಅಹ್ಮದಿಯಾ ಜಮಾಅತ್ ಇಷ್ಟು ಪ್ರಗತಿಯನ್ನು ಗಳಿಸುವುದರ ರಹಸ್ಯವೂ ಇದೇ ಆಗಿದೆ. ಅದು ಪ್ರಗತಿಯ ಮಜಲುಗಳನ್ನು ಏರುತ್ತಾ ಸಾಗುತ್ತಿದೆ.

ಮಸ್‌ಜಿದ್ ನಿರ್ಮಾಣವಾದ ನಂತರ ಅಹ್ಮದಿಯ್ಯತ್ ಅಥವಾ ನೈಜ ಇಸ್ಲಾಮಿನ ಪ್ರಚಾರದಲ್ಲಿ ವಿಶಾಲತೆ ಉಂಟಾಗುತ್ತದೆ. ಇತರ ಸ್ಥಳಗಳಲ್ಲೂ ಇದೇ ರೀತಿ ಉಂಟಾಗಿದೆ. ಇದಕ್ಕೋಸ್ಕರ ಪ್ರತಿಯೊಬ್ಬ ಅಹ್ಮದಿ ತನ್ನ ಜ್ಞಾನವನ್ನು ವರ್ಧಿಸಿಕೊಳ್ಳಬೇಕಾದ ಅವಶ್ಯಕತೆಯಿದೆ. ಪ್ರಶ್ನೆಗಳಿಗೆ ಉತ್ತರ ನೀಡಲು ಸಾಧ್ಯವಾಗಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮ್ಮಿಂದ ಪ್ರತೀಕ್ಷಿಸಿದ ರೀತಿಯಲ್ಲಿ ನಮ್ಮ ಕರ್ಮಗಳನ್ನೂ ಸ್ವಭಾವ ಗುಣಗಳನ್ನೂ ಸಹ ಉನ್ನತ ಮಟ್ಟಕ್ಕೇರಿಸಲು ಪ್ರಯತ್ನಿಸುತ್ತಾ ಇರಬೇಕು. ಇದರ ಬಗ್ಗೆ ನಾನು ಹಿಂದೆ ಅನೇಕ ಸಲ ವಿವರಿಸಿದ್ದೇನೆ. ನಮ್ಮ ಅನುಷ್ಠಾನ ಕರ್ಮಗಳ ಉನ್ನತ ಮಟ್ಟ ಯಾವುದು? ಪವಿತ್ರ ಖುರ್‌ಆನಿನ ಎಲ್ಲಾ ಆಜ್ಞೆಗಳನ್ನು ಪಾಲಿಸುವುದೇ ಆ ಉನ್ನತ ಮಟ್ಟವಾಗಿದೆ. ನೀವು ಯಾವರೀತಿ ಮಾದರಿ ಜೀವನ ನಡೆಸಬೇಕೆಂದರೆ, ಇಲ್ಲಿನ ಜನರು ತಾವಾಗಿಯೇ ನಿಮ್ಮ ಕಡೆಗೆ ಗಮನ ಹರಿಸುವವರಾಗಬೇಕು. ಅವರಿಗೆ ನೀವು ತಿಳಿಸಬೇಕು ಇಸ್ಲಾಮ್ ಜೀವಂತ ಧರ್ಮ ಎನ್ನುವುದಕ್ಕೆ ಸಾಕ್ಷ್ಯವೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಅನುಸರಿಸುವ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಮಿಸಿರುವರು. ಅವರು ನಮಗೆ ಅಲ್ಲಾಹನ ಭೇಟಿ ಮಾಡಿಸಿರುವರು. ಅಲ್ಲಾಹನು ನಮ್ಮ ಪ್ರಾರ್ಥನೆಗಳನ್ನು ಆಲಿಸುತ್ತಾನೆ ಮತ್ತು ಅಂಗೀಕರಿಸುತ್ತಾನೆ. ಅವನು ತನ್ನ ವಾಗ್ದಾನಗಳ ಪ್ರಕಾರ ದೃಷ್ಟಾಂತಗಳನ್ನು ಸಹ ತೋರಿಸುತ್ತಾನೆ. ಆದುದರಿಂದ ಈ ವಾಗ್ದತ್ತ ಮಸೀಹರನ್ನು ನಂಬುವುದರಲ್ಲಿಯೇ ಲೋಕದ ಬಾಳ್ವಿಕೆ ಇದೆ. ಅಲ್ಲಾಹನೊಂದಿಗೆ ಜೀವಂತ ಸಂಬಂಧದ ಭಾಗ್ಯ ವಾಗ್ದತ್ತ ಮಸೀಹರ ಜಮಾಅತ್‌ನಲ್ಲಿ ಸೇರುವುದರಿಂದ ಮಾತ್ರವೇ ಲಭ್ಯವಾಗುವುದು.

ಆದರೆ ನಾವು ಈ ಮಾತುಗಳನ್ನು ಇತರರೊಡನೆ ನಿಸ್ಸಂಕೋಚರಾಗಿ ಹೇಳಲು ಸಾಧ್ಯವೇ? ಅಥವಾ ನಾನು ಹೇಳಬೇಕೋ ಬೇಡವೋ ಎಂದು ಯೋಚಿಸಲಿಕ್ಕಿದೆಯೇ? ಪ್ರಾರ್ಥನೆಯ ಅಂಗೀಕಾರದ ಸಾಕ್ಷ್ಯ ನೀಡಲು ಅನ್ಯರು ಪಂಥಹ್ವಾನ ನೀಡಿದರೆ ಅದನ್ನು ಅಂಗೀಕರಿಸುವ ಸ್ಥಿತಿಯಲ್ಲಿ ನಾನಿದ್ದೇನೆಯೇ? ನನ್ನ ಸಂಬಂಧ ಅಲ್ಲಾಹನೊಂದಿಗೆ ಹೇಗಿದೆ? ಅಲ್ಲಾಹನ ಬಗ್ಗೆ ಭಯ ಮತ್ತು ಪ್ರೀತಿಯನ್ನು ನನ್ನ ಹೃದಯದಲ್ಲಿ ಹೊಂದಿ ಅವನ ಆಜ್ಞೆಗಳ ಪ್ರಕಾರ ಜೀವಿಸಲು ನಾನು ಪ್ರಯತ್ನ ಮಾಡುತ್ತಿರುವೆನೋ ಎಂದೆಲ್ಲಾ ಯೋಚಿಸಬೇಕಾಗಿದೆ. ಅಹ್ಮದಿಯಾದ ನಂತರ ನನ್ನ ಹೊಣೆಗಾರಿಕೆಗಳ ಬಗ್ಗೆ ಪ್ರಜ್ಞೆ ಹೊಂದದೆ ಮತ್ತು ಹೊಣೆಗಾರಿಕೆಗಳನ್ನು ಈಡೇರಿಸದೆ ನಾನು ಲೋಕದ ಜನರಿಗೆ ಆಹ್ವಾನ ನೀಡುವುದಾದರೂ ಹೇಗೆ? ವಾಗ್ದತ್ತ ಮಸೀಹರು ನಿನ್ನೊಳಗೆ ಯಾವ ಪರಿವರ್ತನೆ ಉಂಟುಮಾಡಿರುವರು ಎಂದು ಅನ್ಯರು ಪ್ರಶ್ನಿಸಲಾರರೆ? ನನ್ನೊಳಗೆ ಪರಿಶುದ್ಧ ಬದಲಾವಣೆ ಉಂಟಾಗುವುದೆಂದು ಆಶೆ ನೀಡುವ ನೀನು ನಿನ್ನಲ್ಲಿ ಯಾವ ಬದಲಾವಣೆಯನ್ನು ಮಾಡಿರುವಿ? ಎಂದು ಅನ್ಯರು ಪ್ರಶ್ನಿಸಲಾರರೆ. ವಾಗ್ದತ್ತ ಮಸೀಹರನ್ನು ನಂಬಿದರೆ ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಬಹುದೆಂಬ ಆಶೆ ನನ್ನಲ್ಲಿ ಉಂಟುಮಾಡುವ ನೀನು, ನಿನ್ನ ಸಂಬಂಧ ಅಲ್ಲಾಹನೊಂದಿಗೆ ಹೇಗಿದೆ? ಎಂದು ಅವರು ಕೇಳಲಾರರೆ ಎಂದೆಲ್ಲಾ ನಾವು ಗಂಭೀರವಾಗಿ ಯೋಚಿಸಬೇಕಾಗಿದೆ. ವಾಗ್ದತ್ತ ಮಸೀಹರನ್ನು ನಂಬುವವರೆಂದು ಹೇಳುವ ನಿಮ್ಮ ಕರ್ಮಗಳು ಪವಿತ್ರ ಖುರ್‌ಆನಿನ ಉಪದೇಶಗಳಿಗನುಸಾರವಾಗಿರಬೇಕು. ಹೀಗೆ ಆಗಿಲ್ಲವಾದರೆ ನೀವು ಎಂತಹ ಆಧ್ಯಾತ್ಮಿಕ ಮತ್ತು ಕರ್ಮ ಸಂಬಂಧವಾದ ಕ್ರಾಂತಿಗೆ ಕರೆಯುತ್ತಿರುವಿರಿ. ನಾವು ಇರುವ ಹಾಗೆ ನೀವು ಸಹ ಇರುವಿರಿ. ನಮ್ಮ ನಿಮ್ಮೊಳಗೆ ವ್ಯತ್ಯಾಸವೇನು? ಎಂದೆಲ್ಲಾ ಪ್ರಶ್ನಿಸುವರು.

ಆದುದರಿಂದ ನಾವು ಯಾವಾಗಲೂ ನೆನಪಿಡಬೇಕಾದುದು ಏನೆಂದರೆ ಎಲ್ಲಿ ಅಹ್ಮದಿ ಎಂದು ಒಬ್ಬನು ಗುರುತಿಸಲ್ಪಡುತ್ತಾನೋ ಅವನ ಹೊಣೆಗಾರಿಕೆಗಳು ಅಲ್ಲಿ ಬಹಳ ವರ್ಧಿಸುತ್ತವೆ. ಅವನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರತಿನಿಧಿಯಾಗಿ ಗಣಿಸಲ್ಪಡುತ್ತಾನೆ. ಇದೇ ಕಾರಣದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: ನಮ್ಮ ಕಡೆಗೆ ಸೇರಿದವರು ಎಂದು ಹೇಳಿ ನಮ್ಮನ್ನು ಅಪಕೀರ್ತಿಗೆ ಗುರಿಪಡಿಸಬೇಡಿರಿ. ಆದುದರಿಂದ ಒಬ್ಬ ಅಹ್ಮದಿಯ ಯಾವುದಾದರೊಂದು ಕೆಟ್ಟ ಕೆಲಸದ ಪ್ರಭಾವ ಆ ಕೆಟ್ಟ ಕೆಲಸ ಮಾಡಿದವನಿಗೆ ಮಾತ್ರ ಸೀಮಿತವಾಗುವುದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೂ ಅದರ ಪ್ರಭಾವ

ತಗಲುತ್ತದೆ. ಇದು ಬಹಳ ಮುಖ್ಯ ವಿಷಯವಾಗಿದೆ. ಪ್ರತಿಯೊಬ್ಬ ಅಹ್ಮದಿ ಇದನ್ನು ತನ್ನ ಲಕ್ಷ್ಯದಲ್ಲಿರಿಸಬೇಕು.

ಓರ್ವ ಅಹ್ಮದಿ ತನ್ನ ಎಲ್ಲ ಹೊಣೆಗಾರಿಕೆಗಳನ್ನು ಈಡೇರಿಸುವುದಾದರೆ ಅವನು ಅಹ್ಮದಿಯ್ಯತ್ತಿನ ರಾಯಬಾರಿ ಆಗುತ್ತಾನೆ. ಲೋಕದ ದೃಷ್ಟಿಯಲ್ಲಿ ಅವನ ಸ್ಥಾನ ವರ್ಧಿಸುವುದು. ಲೋಕವು ಅವನ ಕಡೆಗೆ ಸಾಗುವುದು. ಅಂತಹ ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರತಿನಿಧಿಗಳಾಗುವರು. ತಬ್ಲೀಗ್ ಮಾಡುವವರೂ ಲೌಕಿಕ ಮನೋಭಾವದ ಜನರ ಇಹ ಪರಲೋಕಗಳ ಸ್ಥಿತಿಯನ್ನು ಸುಧಾರಣೆ ಮಾಡುವವರೂ ಆಗುವರು. ಅವರು ಅಲ್ಲಾಹನ ಅನುಗ್ರಹಗಳಿಗೆ ಪಾತ್ರರಾಗುವರು.

ಇಂತಹ ಸ್ಥಿತಿಗೆ ತಲಪಲು ನಾವು ಧಾರಾಳ ಪ್ರಯತ್ನ ಮಾಡಬೇಕಾಗಿದೆ. ನಮಾಝ್‌ಗಳನ್ನು ಐದು ಸಾರಿ ಸಾಮೂಹಿಕವಾಗಿ ಅನುಷ್ಠಿಸುವವರಾಗಬೇಕು. ಮಸ್‌ಜಿದ್‌ಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸಬೇಕು. ಫರ್ಝ್ ನಮಾಝ್‌ಗಳನ್ನು ಮಾತ್ರವಲ್ಲ ನಫ್ಲ್ ನಮಾಝ್‌ಗಳನ್ನು ಸಹ ಅನುಷ್ಠಿಸಿ ಅಲ್ಲಾಹನೊಂದಿಗೆ ಸಂಬಂಧವನ್ನು ಜೋಡಿಸುವವರಾಗಬೇಕು. ಅದೇರೀತಿ **ಹುಖೂಖುಲ್ ಇಬಾದ್** (ಮನುಷ್ಯರಿಗೆ ಸಂಬಂಧಿಸಿದ ಹಕ್ಕುಗಳು) ಬಗ್ಗೆ ಸಹ ಲಕ್ಷ್ಯ ನೀಡುವವರಾಗಬೇಕಾದುದು ಆವಶ್ಯಕವಾಗಿದೆ. ಪ್ರತಿಯೊಬ್ಬ ಅಹ್ಮದಿ ಪುರುಷ ಮತ್ತು ಮಹಿಳೆ ತನ್ನ ಜವಾಬ್ದಾರಿಗಳನ್ನು ಮನವರಿಕೆ ಮಾಡುವ ಆವಶ್ಯಕತೆ ಇರುತ್ತದೆ.

ನಾವು ಬಹಳ ಉತ್ಸಾಹದಿಂದ ಇಲ್ಲಿನ ಜನರೊಂದಿಗೆ ಹೇಳುತ್ತೇವೆ– ನಾವು ಈ ಮಸ್‌ಜಿದ್‌ಗೆ **'ಮಸ್‌ಜಿದ್ ಮರ್‌ಯಮ್'** ಎಂದು ಹೆಸರಿಸಿದ್ದೇವೆ. ಅವರು ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರ ತಾಯಿ ಆಗಿರುವುದರಿಂದ ನಿಮಗೆ ಸಹ ಅವರು ಪ್ರಿಯರಾಗಿದ್ದಾರೆ. ಆದರೆ ಅವರು ನಮಗೆ ಪ್ರಿಯರಾದುದಕ್ಕೆ ಬೇರೆ ಒಂದು ಕಾರಣ ಕೂಡ ಇದೆ. ಹಝ್ರತ್ ಮರ್‌ಯಮರ ಸಾತ್ವಿಕ ಗುಣಗಳನ್ನು ಮತ್ತು ದೇವಭಕ್ತಿಯನ್ನು ಗುರುತಿಸಿ ಅಲ್ಲಾಹನು ಪ್ರೀತಿಯಿಂದ ಅವರ ಮೇಲೆ ದೃಷ್ಟಿ ಬೀರಿದನು. ಮತ್ತು ಸತ್ಯವಿಶ್ವಾಸಿಗಳೊಂದಿಗೆ ಹೇಳಿದನು: ನೀವು ಮರ್‌ಯಮರ ಗುಣಗಳನ್ನು ನಿಮ್ಮಲ್ಲಿ ಸೃಷ್ಟಿಸಿರಿ ಎಂದು. ಹಝ್ರತ್ ಮರ್‌ಯಮರು ತನ್ನ ಚಾರಿತ್ರ್ಯವನ್ನು ಸಂರಕ್ಷಿಸಿದರು. ಅಲ್ಲಾಹನ ಬಗ್ಗೆ ಭಯ ಮತ್ತು ಭಕ್ತಿಯ ಕಾರಣ ಅವರು ಹಾಗೆ ಮಾಡಿದರು. ಅವರು ಅಲ್ಲಾಹನನ್ನು ಪರಿಪೂರ್ಣ ಅನುಸರಿಸುವವರೂ ಅಲ್ಲಾಹನ ಆಜ್ಞೆಗಳನ್ನು ಪಾಲಿಸುವವರೂ ಆಗಿದ್ದರು. ಅವರು ಸತ್ಯಸಂಧರಾಗಿದ್ದರು. ಆದುದರಿಂದ ನೈಜ ಮುಸ್ಲಿಮರು ಪುರುಷರಾದರೂ ಸ್ತ್ರೀಯರಾದರೂ ಅವರು ಹಝ್ರತ್ ಮರ್‌ಯಮರ ಸದ್ಗುಣಗಳನ್ನು ಹೊಂದಲು ಅಲ್ಲಾಹನು ಆಜ್ಞಾಪಿಸಿದ್ದಾನೆ. ನಾನು ಈ ಸಂದರ್ಭದಲ್ಲಿ ಅಹ್ಮದಿ ಮಹಿಳೆಯರೊಂದಿಗೂ ಬಾಲಿಕೆಯರೊಂದಿಗೂ ಹೇಳಲು ಬಯಸುವುದೇನೆಂದರೆ, ಇಲ್ಲಿನ ಜನರು ಹಝ್ರತ್ ಮರ್‌ಯಮರಿಗೆ ಗೌರವ ಮಾತ್ರ ನೀಡುತ್ತಾರೆ. ಆದರೆ ಅವರು ಹಝ್ರತ್ ಮರ್‌ಯಮರ ಸದ್ಗುಣಗಳನ್ನು ಹೊಂದಲು ಪ್ರಯತ್ನಿಸುವುದಿಲ್ಲ. ಇದು ಇಲ್ಲಿನ ಜನರ ಬಲಹೀನತೆಯಾಗಿದೆ. ಆದರೆ ಒಬ್ಬ ನೈಜ ಮುಸ್ಲಿಮ್ ಪುರುಷ ಮತ್ತು ಮಹಿಳೆ ಹಝ್ರತ್ ಮರ್‌ಯಮರ ಹಾಗೆ ಅಲ್ಲಾಹನನ್ನು ನಿಜವಾಗಿಯೂ ಅನುಸರಿಸುವವರಾಗಿ ಅಲ್ಲಾಹನ ಆಜ್ಞೆಗಳ ಪ್ರಕಾರ ನಡೆಯಲು ಪ್ರಯತ್ನ ಮಾಡುವವರಾಗಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ಹೀಗೆ ಉಪದೇಶಿಸಿದ್ದಾರೆ:

"ನಾನು ಸತ್ಯವಾಗಿ ಹೇಳುತ್ತೇನೆ. ಸಾತ್ವಿಕರಿಗೆ ಅಲ್ಲಾಹನು ಇದೊಂದು ಸುಸಂದರ್ಭವನ್ನು ಉಂಟುಮಾಡಿರುವನು. ಇದರಿಂದ ಲಾಭ ಪಡೆಯುವವರೇ ಅನುಗ್ರಹ ಭರಿತರಾಗಿದ್ದಾರೆ. ನನ್ನೊಂದಿಗೆ ಸಂಬಂಧ ಜೋಡಿಸಿರುವ ಜನರು ಖಂಡಿತವಾಗಿಯೂ ಅಹಂಕಾರ ಭರಿತರಾಗಬಾರದು– ನಿಮಗೆ ಸಿಗಬೇಕಾದುದು ದೊರಕಿತು ಎಂದು ಯೋಚಿಸಿ. ನನ್ನನ್ನು ನಿರಾಕರಿಸುವವರಿಗಿಂತ ನೀವು ಸಾತ್ವಿಕತೆಗೆ ಸಮೀಪವಾಗಿರುವಿರಿ ಎನ್ನುವುದು ಸತ್ಯವೇ ಆಗಿದೆ. ಅವರು ತಮ್ಮ ತೀವ್ರ ನಿರಾಕರಣೆ ಮತ್ತು ಹೀನೈಸುವಿಕೆ ಕಾರಣ ಅಲ್ಲಾಹನ ಕೋಪಕ್ಕೆ ಪಾತ್ರರಾಗಿರುವರು. ನೀವು ನನ್ನ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಹೊಂದಿ ಅಲ್ಲಾಹನ ಕೋಪದಿಂದ ನಿಮ್ಮನ್ನು ರಕ್ಷಿಸಿಕೊಳ್ಳಲು ಚಿಂತಿಸಿದಿರಿ. ಆದರೆ ಸತ್ಯವೇನೆಂದರೆ ಅಲ್ಲಾಹನು ಶಾಶ್ವತ ಜೀವಿತಕ್ಕಾಗಿ ಸೃಷ್ಟಿಸಿದ ನೀರೊರತೆಯ ಸಮೀಪಕ್ಕೆ ಮಾತ್ರ ನೀವು ತಲಪಿರುವಿರಿ. ನೀವು ಅದರ ನೀರನ್ನು ಇನ್ನೂ ಕುಡಿದಿಲ್ಲ. ಅದರಿಂದ ನಿಮ್ಮ ದಾಹ ಶಮನವಾಗುವ ಭಾಗ್ಯ ಲಭಿಸಲು ಅಲ್ಲಾಹನ ಅನುಗ್ರಹ ಬೇಡಿಕೊಳ್ಳಿರಿ. ಏಕೆಂದರೆ ಅಲ್ಲಾಹನ ಸಹಾಯವಿಲ್ಲದೆ ಏನೂ ಸಾಧ್ಯವಾಗದು. ಅಲ್ಲಾಹನೇ ನಿಮಗೆ ಭಾಗ್ಯ ನೀಡುತ್ತಾನೆ. ಈ ನೀರೊರತೆಯಿಂದ ನೀರನ್ನು ಕುಡಿದವನು ನಾಶವಾಗಲಾರನೆಂದು ನನಗೆ ದೃಢವಾಗಿ ತಿಳಿದಿದೆ. ಏಕೆಂದರೆ ಈ ನೀರು ಜೀವದಾಯಕವಾಗಿದೆ. ಅದು ನಾಶದಿಂದ ಸಂರಕ್ಷಿಸುತ್ತದೆ. ಶೈತಾನನ ಆಕ್ರಮಣಗಳಿಂದ ರಕ್ಷಿಸುತ್ತದೆ. ಈ ನೀರೊರತೆಯಿಂದ ದಾಹ ಶಮನಮಾಡಿಕೊಳ್ಳುವುದು ಹೇಗೆ? ಅಲ್ಲಾಹನು ನಿಮಗೆ ಆಜ್ಞಾಪಿಸಿದ ಹಕ್ಕುಗಳನ್ನು ಈಡೇರಿಸಿರಿ. ಪೂರ್ಣವಾಗಿ ಈಡೇರಿಸಿರಿ. ಅದರಲ್ಲೊಂದು ಅಲ್ಲಾಹನ ಹಕ್ಕುಗಳಾಗಿವೆ. ಇನ್ನೊಂದು ಅಲ್ಲಾಹನ ಸೃಷ್ಟಿಗಳ ಹಕ್ಕುಗಳಾಗಿವೆ."

ಅಲ್ಲಾಹನು ನಾವು ಯಾವಾಗಲೂ ಹಕ್ಕುಗಳನ್ನು ಈಡೇರಿಸುವವರನ್ನಾಗಿ ನಮ್ಮನ್ನು ಮಾಡಲಿ. ನಾವು ಅಲ್ಲಾಹನ ನೀರೊರತೆಯಿಂದ ಅನುಗ್ರಹ ಗಳಿಸುತ್ತಾ ಹೋಗುವವರಾಗೋಣ. ಮತ್ತು ಈ ಅನುಗ್ರಹವನ್ನು ಲೋಕವು ಪಡೆಯುವಂತಾಗಲಿ.

ಈ ಮಸ್‌ಜಿದ್ ಬಗ್ಗೆ ಕೆಲವು ಮಾಹಿತಿಗಳನ್ನು ವಿವರಿಸುವೆನು. 2010ರಲ್ಲಿ ಈ ಮಸ್‌ಜಿದ್‌ಗೆ ನಾನು ಅಸ್ತಿಭಾರ ಹಾಕಿದೆ. ಇಲ್ಲಿನ ಜಮೀನಿನ ಒಟ್ಟು ವಿಸ್ತೀರ್ಣ 2400 ಚದರ ಮೀಟರ್ ಎಂದರೆ ಅಂದಾಜು ಮುಕ್ಕಾಲು ಎಕ್ರೆ ಆಗಿದೆ. ಮಸ್‌ಜಿದ್ ವಿಸ್ತೀರ್ಣ 217 ಚದರ ಮೀಟರ್ ಆಗಿದೆ. 2009ರಲ್ಲಿ ಈ ಜಮೀನನ್ನು ಐದು ಲಕ್ಷ ಹದಿನೈದು ಸಾವಿರ ಯುರೋಗೆ ಖರೀದಿಸಲಾಯಿತು. ಆಗ ಇಲ್ಲಿ ಒಂದು ಕಟ್ಟಡ ಸಹ ಇತ್ತು. ಮಸ್‌ಜಿದ್ ನಿರ್ಮಾಣಕ್ಕೆ ಹನ್ನೊಂದು ಲಕ್ಷ ಯುರೋ ಖರ್ಚಾಗಿದೆ.

ಮೈನ್ ಹಾಲ್ ಹಾಗೂ ಇತರ ಸ್ಥಳ ಸೇರಿ ಇದರಲ್ಲಿ ಒಟ್ಟು ಇನ್ನೂರು ಜನ ನಮಾಝ್ ಮಾಡಬಹುದು. ಇಲ್ಲಿ ಮೊದಲೇ ಇದ್ದ ಕಟ್ಟಡದಲ್ಲಿ ಮೂರು ಕೋಣೆಗಳಿವೆ. ಅದರಲ್ಲಿ ಅಡಿಗೆ ಮನೆ ಮೊದಲಾದುವು ಇವೆ. ಹದಿನೇಳು ವಾಹನಗಳು ಪಾರ್ಕ್ ಮಾಡಬಹುದಾದ ಸೌಕರ್ಯ ಇದೆ.. ಈ ಸ್ಥಳದ ಲೊಕೇಶನ್ ಸಹ ಬಹಳ ಚೆನ್ನಾಗಿದೆ. ಹತ್ತಿರ ಕುದುರೆಯ ರೇಸ್‌ಕೋರ್ಸ್ ಇದೆ. ಅಲ್ಲಿಂದ ಈ ಮಸ್‌ಜಿದ್ ಚೆನ್ನಾಗಿ ಕಾಣಿಸುತ್ತದೆ. ಇಲ್ಲಿ ಒಂದು ಪ್ರಸಿದ್ಧ ಉತ್ಸವ ಸಹ ಜರಗುತ್ತದೆ. ಅದರ ವೀಕ್ಷಕರಾಗಿ ಮತ್ತು ಇಲ್ಲಿನ ರೇಸ್ ವೀಕ್ಷಕರಾಗಿ ಅಂದಾಜು ನಲ್ವತ್ತು ಸಾವಿರ ಜನರು ಜಮಾಯಿಸುತ್ತಾರೆ ಎಂದು ಹೇಳಲಾಗುತ್ತದೆ. ಇಲ್ಲಿಗೆ ಹೊರಗಿನಿಂದ ಜನರು ಬರುವ ಕಾರಣ ಮಸ್‌ಜಿದ್ ಬಗ್ಗೆ ಪ್ರಚಾರವಾಗುವುದು. ಈ ಪ್ರದೇಶ ಜನನಿಬಿಡವಾಗಿದೆ. ನೂರಾರು ಜನರು ಮಸ್‌ಜಿದ್ ದಾಟಿಕೊಂಡು ಹೋಗುತ್ತಾರೆ. ಇಲ್ಲಿ ವಿಧ್ಯಾರ್ಥಿಗಳ ಒಂದು ಹೋಸ್ಟೆಲ್ ಸಹ ಇದೆ. ಏರ್‌ಪೋರ್ಟ್ ತಲಪಲು ಇಲ್ಲಿಂದ ಹತ್ತು ನಿಮಿಷಗಳ ಪ್ರಯಾಣ ಸಾಕಾಗುತ್ತದೆ. ಈ ಮಸ್‌ಜಿದ್‌ಗೆ ಸಮೀಪ ಕಂಪೌಂಡ್ ಗೋಡೆಗೆ ತಾಗಿಕೊಂಡು ಎರಡು ಕಟ್ಟಡಗಳನ್ನು ನಂತರ ಖರೀದಿಸಲಾಗಿದೆ. ಅವುಗಳಲ್ಲಿಯೂ ಧಾರಾಳ ಸ್ಥಳವಿದೆ. ಇಲ್ಲಿನ ಕಟ್ಟಡಗಳ ಸಂಕೀರ್ಣ ಎಲ್ಲಾ ವಿಧಗಳಲ್ಲೂ ಅನುಗ್ರಹದಾಯಕವಾಗಲಿ ಮತ್ತು ಜನರು ಮಸ್‌ಜಿದ್‌ಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸುವವರಾಗಲಿ– ಆಮೀನ್.

---------------*****--------------


*Friday Sermon delivered by Hadrath Khaleefatul Masih Al Khamis(atba)*

*at Maryam Mosque in Galway, Irreland on 26-09-2014.*

Summarized by *Nazarath Nashr-O-Isha'ath, Qadian*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team,** *Ahmadiyya Muslim Jama`at, Karnataka*

**Email**: *khutuba.kannada@gmail.com*